

# ನೆರಳು– ಬೆಳಕಿನ ವೈವಿಧ್ಯ

■ ಚಿತ್ರ–ಲೇಖನ: **ಎಂ.ಆರ್. ಮಂಜುನಾಥ್**

ಚಳಿಗಾಲದಲ್ಲಿ ನೆರಳು ಬೆಳಕಿನ ಹೊಂದಾಣಿಕೆಯ ಹಾಗೂ ವೈವಿಧ್ಯಮಯ ಬೆಳಕಿನ ಸೀಳುಗಳ ದೃಶ್ಯಗಳು ಅದ್ಭುತ. ಕ್ಯಾಮೆರಾ ಕಣ್ಣಲ್ಲಿ ಅವುಗಳನೆಲ್ಲ ವರ್ಣ ಸಂಯೋಜನೆಯೊಂದಿಗೆ ಕ್ಲಿಕ್ಕಿಸುವುದು ಒಂದು ಸವಾಲು.

ಈ ನೆರಳು– ಬೆಳಕು ಕ್ಷಣ ಕ್ಷಣಕ್ಕೂ ಬದಲಾಗುತ್ತಿರುತ್ತದೆ, ಪ್ರಕೃತಿಯ ಜತೆ ಆಟವಾಡುತ್ತಿರುತ್ತದೆ. ಕ್ಯಾಮರಾ ಕಣ್ಣು ಹೊಂದಿಸಿಕೊಳ್ಳುವುದರೊಳಗೆ ಸಂಯೋಜನೆಯೇ ವ್ಯತ್ಯಾಸವಾಗಿಬಿಡುತ್ತದೆ.

ನಿಸರ್ಗಸಹಜ ಬೆಳಕಿನಲ್ಲಿ ಇಂತಹ ಛಾಯಾ ಸಂಯೋಜನೆಗಳು ಸಿಗುವ ಪರಿಸರದ ಹಳ್ಳಿಗಳು ಈಗಲೂ ಅಲ್ಲಲ್ಲಿ ಉಳಿದುಕೊಂಡಿವೆ. ಹಳ್ಳಿಗಳ ಪರಿಸರದ ಸೌಂದರ್ಯ, ಸೂರ್ಯೋದಯ ಮತ್ತು ಸೂರ್ಯಾಸ್ತದ ಸಂದರ್ಭಗಳು ಛಾಯಾಗ್ರಾಹಕರಿಗೆ ಹೆಚ್ಚು ಮುದ ನೀಡುವಂತಿರುತ್ತವೆ. ಬೆಳಕಿನ ಕೋಲುಗಳು ನೀಳವಾಗಿ ಚಾಚಿರುವಂತೆಯೇ, ಹಿಂಡು ಹಿಂಡು ಜಾನುವಾರುಗಳು ಸಾಗುವ ಹಾದಿಯ ಬೆನ್ನು ಹತ್ತುವುದು ಎಂತಹ ಛಾಯಾಗ್ರಾಹಕರಿಗೂ ಚೇತೋಹಾರಿ ಸಂಗತಿ. ಜಾನುವಾರುಗಳ ಜೊತೆಗೆ ಕಾಡಿನಿಂದ ಆಯ್ದ ಕಟ್ಟಿಗೆಗಳನ್ನು ತಲೆಯ ಮೇಲೆ ಹೊತ್ತು ಸಾಗುವ ಮಹಿಳೆಯರು, ಕುರಿಕಾಯುವ ಕುರುಬರು, ರಾಸುಗಳು ಎಬ್ಬಿಸುವ ಧೂಳು .. ಛಾಯಾಗ್ರಾಹಕರಿಗೆ ಹಬ್ಬದೂಟದಂತೆ.

(8ನೇ ಪುಟ ನೋಡಿ)